# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 17(20)

ಸದಸ್ಯರ ಹೆಸರು : ಶ್ರೀ ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 27.01.2026

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ನಗರಗಳಲ್ಲಿನ ನೀರು ಸರಬರಾಜು ಘಟಕಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು WHO ಹಾಗೂ BIS ಮಾನದಂಡಗಳಂತೆ ನಿಯಮಿತವಾಗಿ ಪರೀಕ್ಷಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ನೀರು ಸರಬರಾಜು ಘಟಕಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ಆಯಾ ಸ್ಥಳೀಯ ಸಂಸ್ಥೆಗಳಲ್ಲಿನ ವ್ಯಾಪ್ತಿಯ ಪ್ರಯೋಗಾಲಯಗಳಲ್ಲಿ WHO ಹಾಗೂ BIS ಮಾನದಂಡಗಳಂತೆ ನಿಯಮಿತವಾಗಿ ಪರೀಕ್ಷಿಸಲಾಗುತ್ತಿದೆ.<br>• ನೀರಿನ ವಿವಿಧ ಮೂಲಗಳಾದ ಜಲಾಶಯಗಳು, ಕೆರೆಗಳು, ನದಿಗಳು, ತೆರೆದ ಬಾವಿ ಹಾಗೂ ಕೊಳವೆ ಬಾವಿಗಳಿಂದ ಜನರಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.<br>• ಜಲಾಶಯಗಳು, ನದಿಗಳಿಂದ ಬರುವ ನೀರನ್ನು ಜಲಶುದ್ಧೀಕರಣ ಘಟಕಗಳಲ್ಲಿ Aeration Sand Filtration and Chlorination ಮೂಲಕ ಕಚ್ಚಾ ನೀರನ್ನು ಶುದ್ಧೀಕರಿಸಿ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.<br>• ತೆರೆದ ಬಾವಿ ಹಾಗೂ ಕೊಳವೆ ಬಾವಿಯಿಂದ ನೀರನ್ನು ವಾಟರ್ ಫಿಲ್ಟರ್‌ಗಳ ಮುಖಾಂತರ ಟ್ಯಾಂಕ್ / OHT ಗಳಿಗೆ ತುಂಬಿಸಿ ಜನರಿಗೆ ಕಾಲಕಾಲಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. |
| ಆ) | ಜನರಿಗೆ ಯಾವ ಯಾವ ಮೂಲದಿಂದ ಹಾಗೂ ಯಾವ ವಿಧಾನಗಳಲ್ಲಿ ನೀರನ್ನು ಸರಬರಾಜು ಮಾಡಲಾಗುತ್ತಿದೆ; ಯಾವ ರೀತಿಯ ಶುದ್ಧೀಕರಣ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ; | |
| ಇ) | ರಾಜ್ಯದ ಪ್ರತಿ ಜಿಲ್ಲೆಗಳಲ್ಲಿಯೂ ಸುಸಜ್ಜಿತ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು ಸರ್ಕಾರ ಯಾವ ಯೋಜನೆ ರೂಪಿಸಿದೆ; (ರೂಪಿಸಿದ್ದಲ್ಲಿ ವಿವರ ನೀಡುವುದು); | ಪ್ರಸ್ತುತ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 2029080/DMA/UPA/SFCW/1/2026, ದಿನಾಂಕ: 16.01.2026ರನ್ವಯ, ಈ ಕೆಳಕಂಡಂತೆ ಕ್ರಮವಹಿಸಲು ನಿರ್ದೇಶನ ನೀಡಲಾಗಿದೆ.<br>• ಪ್ರಸ್ತುತ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಹತ್ತಿರ ಇರುವ ನಗರ ಸ್ಥಳೀಯ ಸಂಸ್ಥೆಗಳ ಪ್ರಯೋಗಾಲಯಗಳು/ಆರ್.ಡಿ.ಪಿ.ಆರ್ ಇಲಾಖೆ /ಆರೋಗ್ಯ ಇಲಾಖೆ/ FSSAI ಪ್ರಯೋಗಾಲಯಗಳು /ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಪ್ರಯೋಗಾಲಯಗಳಲ್ಲಿ ಪ್ರತಿದಿನ ನೀರಿನ ಸ್ಯಾಂಪಲ್ ಗಳನ್ನು ಪರೀಕ್ಷೆಗೊಳಪಡಿಸಲು ಅಗತ್ಯ ಕ್ರಮವಹಿಸುವುದು.<br>• ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಅಥವಾ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ NABL Accredited ಆಗಿರುವ ನೀರಿನ ಗುಣಮಟ್ಟ ಪರೀಕ್ಷಿತ ಲ್ಯಾಬ್‌ಗಳಲ್ಲಿ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಪ್ರತಿದಿನ/15ದಿನ/1 ತಿಂಗಳು/6 ತಿಂಗಳು ಅಂತರದ ನೀರಿನ ಗುಣಮಟ್ಟದ ಪರೀಕ್ಷೆಯನ್ನು ಕೈಗೊಳ್ಳುವುದು. |

| | | |
|---|---|---|
| ಈ) | ನೀರು ಶುದ್ಧೀಕರಣ ಘಟಕಗಳಲ್ಲಿ ಪ್ರಿ-ಕ್ಲೋರಿನೇಷನ್ ಮತ್ತು ಪೋಸ್ಟ್ ಕ್ಲೋರಿನೇಷನ್ ಹಂತಗಳಲ್ಲಿ ಬಳಸುವ ಕ್ಲೋರಿನ್ ಪ್ರಮಾಣವನ್ನು ವೈಜ್ಞಾನಿಕವಾಗಿ ಅಳೆಯಲು ಆಧುನಿಕ ಉಪಕರಣಗಳನ್ನು ಹಾಗೂ ತರಬೇತಿ ಪಡೆದ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು | ನೀರು ಶುದ್ಧೀಕರಣ ಘಟಕಗಳಲ್ಲಿ ಪ್ರಿ-ಕ್ಲೋರಿನೇಷನ್ ಮತ್ತು ಪೋಸ್ಟ್ ಕ್ಲೋರಿನೇಷನ್ ಹಂತಗಳಲ್ಲಿ ಬಳಸುವ ಕ್ಲೋರಿನ್ ಪ್ರಮಾಣವನ್ನು ವೈಜ್ಞಾನಿಕವಾಗಿ ಅಳೆಯಲು ಆಧುನಿಕ ಉಪಕರಣಗಳಾದ Chlorine Analyser ಮತ್ತು Chloroscope ಬಳಸಲಾಗುತ್ತಿದೆ. |
| ಉ) | ನೀರು ಸರಬರಾಜು ಓವರ್ ಹೆಡ್ ಟ್ಯಾಂಕ್ ಗಳನ್ನು ಎಷ್ಟು ದಿನಗಳಿಗೊಮ್ಮೆ ಸ್ವಚ್ಛ ಮಾಡಲಾಗುತ್ತಿದೆ ಹಾಗೂ ಇದಕ್ಕೆ ಇರುವ ಮಾನದಂಡಗಳೇನು; ಯಾರಿಂದ ಯಾವ ರೀತಿಯಲ್ಲಿ ಸ್ವಚ್ಛ ಮಾಡಲಾಗುತ್ತದೆ; | • ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 802905/DMA/DEV/OTH/61/2022, ದಿನಾಂಕ: 29.10.2022 ರಂತೆ ವರ್ಷಕ್ಕೆ 02 ಬಾರಿ ನೀರು ಸಂಗ್ರಹಣೆ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿಗಧಿತವಾಗಿ ಸ್ವಚ್ಛಗೊಳಿಸಲು ಸೂಚಿಸಲಾಗಿದೆ.<br>• ಪ್ರತಿವರ್ಷ ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆಯಲ್ಲಿನ WTP, OHT, GLSR Cistern, Sump ಇತ್ಯಾದಿಗಳನ್ನು ಸೆಪ್ಟೆಂಬರ್ 15 ರಿಂದ ಸೆಪ್ಟೆಂಬರ್ 30ರ ವರೆಗೆ ಮತ್ತು 2ನೇ ಬಾರಿಗೆ 6 ತಿಂಗಳ ನಂತರ ಮಾರ್ಚ್ 15 ರಿಂದ ಮಾರ್ಚ್ 30ರ ವರೆಗೆ ನೀರು ಸರಬರಾಜಿನಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಸ್ವಚ್ಛಗೊಳಿಸಲು ಮಾನದಂಡಗಳನ್ನು ರೂಪಿಸಿದ್ದು, ಅದರಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಕ್ರಮವಹಿಸಲಾಗುತ್ತಿದೆ.<br>• ಓವರ್ ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ನಿಯಾಮಾನುಸಾರ ಟೆಂಡರ್ ಆಹ್ವಾನಿಸಿ ಟೆಂಡರ್ ದಾರರ ಮುಖಾಂತರ ಸ್ವಚ್ಛಗೊಳಿಸಲಾಗುತ್ತದೆ. |
| ಊ) | ಕುಡಿಯುವ ನೀರಿನಿಂದ ಉಂಟಾಗುವ ರೋಗಗಳನ್ನು ತಡೆಗಟ್ಟುವ ಉದ್ದೇಶದಿಂದ ರಾಜ್ಯಮಟ್ಟದ್ದಲ್ಲಿ ಸಮಗ್ರ Water Quality Monotiring and public Health protection program ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ? (ವಿವರ ನೀಡುವುದು) | ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: 2029080/DMA/UPA/SFCW/1/2026, ದಿನಾಂಕ: 16.01.2026ರಂತೆ ಕುಡಿಯುವ ನೀರಿನಿಂದ ಉಂಟಾಗುವ ರೋಗಗಳನ್ನು ತಡೆಗಟ್ಟುವ ಉದ್ದೇಶದಿಂದ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು / ಮುಖ್ಯಾಧಿಕಾರಿಗಳು, ಆರೋಗ್ಯಾಧಿಕಾರಿಗಳು / ಆರೋಗ್ಯ ನಿರೀಕ್ಷಕರು/ಪರಿಸರ ಅಭಿಯಂತರರು ತಮ್ಮ ವ್ಯಾಪ್ತಿಯ ನಗರ/ಪಟ್ಟಣಗಳಲ್ಲಿ ಕುಡಿಯುವ ನೀರಿನ ಶುದ್ಧತೆ ಹಾಗೂ ಸುರಕ್ಷತೆ ಬಗ್ಗೆ ಹೆಚ್ಚಿನ ಗಮನವಹಿಸಿ, ನೀರಿನ ಮೂಲಕ ಹರಡುವ ಸಾಂಕ್ರಾಮಿಕ ರೋಗಗಳನ್ನು ತಡೆಯುವ ಹಾಗೂ ಸ್ವಚ್ಛತೆಯನ್ನು ಕಾಪಾಡುವ ಬಗ್ಗೆ ಸೂಕ್ತ ಕ್ರಮಗಳನ್ನು ಕಾಲಕಾಲಕ್ಕೆ ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.<br>ಮುಂದುವರೆದು ರಾಜ್ಯಮಟ್ಟದಲ್ಲಿ ಸಮಗ್ರ Water Quality Monotiring and public Health protection program ಜಾರಿಗೆ ತರುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾಪ ಇರುವುದಿಲ್ಲ. |

**ಇ-ಸಂಖ್ಯೆ: ನಅಇ 130 ಜಿಇಎಲ್ 2026 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು.